* Govt Order Copy of Approval to Dr. P. R. Pathod Dept of Economics with effect from 17.01.2013
(Sl. No. 02 to be reffered)

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥಾ ಸಾರಂಗಮಠ, ಸಿಂಧಗಿ, ಇವರ ವ್ಯಾಪ್ತಿಯಲ್ಲಿ ಬರುವ ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಸಿಂಧಗಿ, ಇಲ್ಲಿ ಖಾಲಿ ಇರುವ ಹುದ್ದೆಗೆ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಹೊಂದಿದ ಉಪನ್ಯಾಸಕರ ನೇಮಕಾತಿ ಅನುಮೋದಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿ:03.10.81 ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳು.
2) ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಎನ್ಇ/2009 ದಿ:24-12-2009.
3) ಸರ್ಕಾರದ ಪತ್ರ ಸಂಖ್ಯೆ: ಇಡಿ/26/ಯುಪಿಸಿ/2012 ದಿ:22-08-2012, ಹಾಗೂ 30.11.2012.
4) ಈ ಕಛೇರಿಯ ಸಮಸಂಖ್ಯೆಯ ಪತ್ರದ ದಿನಾಂಕ:22-12-2009.
5) ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ, ಇವರ ಪತ್ರ ಸಂಖ್ಯೆ: ಕಾಶಿಇ/ಪ್ರಾಕಧಾ7004/ಜಿಇಎಸ್/7/2008-09/3336 ದಿ:01.02.2011.

******

### ಪ್ರಸ್ತಾವನೆ:

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಮಂಜೂರಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ (4)ರ ಈ ಕಛೇರಿಯ ಪತ್ರದಲ್ಲಿ ಸಿಂಧಗಿಯ ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಖಾಲಿ ಇರುವ ಖಾಲಿ ಇರುವ 04 ಬೋಧಕ ಹುದ್ದೆಗಳಿಗೆ ಜಾಹೀರಾತುಪಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ಸಂದರ್ಶನಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಧಾರವಾಡ, ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ತಿಳಿಸಲಾಗಿತ್ತು. ಅದರಂತೆ ಪ್ರಾದೇಶಿಕ ಜಂಟಿ ನಿರ್ದೇಶಕರು ದಿ:01-02-2011ರಲ್ಲಿ ಸದರಿ ಕಾಲೇಜಿನ 04 ಮಂದಿ ಉಪನ್ಯಾಸಕರ ಹುದ್ದೆಗಳನ್ನು ಆಡಳಿತ ಮಂಡಳಿ ಜಾಹೀರಾತುಪಡಿಸಿ, ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ಆಯ್ಕೆ ಸಮಿತಿ ರಚಿಸಿ, ಆಯ್ಕೆ ಮಾಡಿ ಅನುಮೋದನೆಗೆ ಸಲ್ಲಿಸಿರುತ್ತಾರೆ. ಈ ನಡುವೆ ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿ ಸದರಿ ಕಾಲೇಜಿನ ಪದವಿ ವಿಭಾಗದಲ್ಲಿ ಮಂಜೂರಾದ ಬೋಧಕರ ಖಾಲಿ ಹುದ್ದೆಗಳಿಗೆ ಆಯ್ಕೆಯಾಗಿ ಅನುಮೋದನೆ ಸ್ಥಗಿತಗೊಳಿಸಿರುವ ಪ್ರಕರಣಗಳಲ್ಲಿ ನಿಯಮಾನುಸಾರ ಆಯ್ಕೆ ಪ್ರಕ್ರಿಯೆ ಕೈಗೊಂಡಿರುವ ಬಗ್ಗೆ ಹಾಗೂ ಮೀಸಲಾತಿ ನೀತಿ ಪಾಲಿಸಲಾಗಿದೆ ಎಂಬುದರ ಬಗ್ಗೆ ಖಚಿತಪಡಿಸಿಕೊಂಡು, ನಂತರ ಸದರಿ ಆಯ್ಕೆಗಳನ್ನು ಅನುಮೋದಿಸುವಂತೆ ಸೂಚಿಸಲಾಗಿದೆ. ಈ ಹಿನ್ನಲೆಯಲ್ಲಿ ಉಲ್ಲೇಖ (5)ರಲ್ಲಿ ಧಾರವಾಡ, ಪ್ರಾದೇಶಿಕ ಜಂಟಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಖಾಲಿ ಹುದ್ದೆ ಹಾಗೂ ಮೀಸಲಾತಿಗನುಗುಣವಾಗಿ ಆಯ್ಕೆ ಸಮಿತಿ ಮೂಲಕ ಆಯ್ಕೆ ಹೊಂದಿರುವ ಉಪನ್ಯಾಸಕರುಗಳಿಗೆ ನೇಮಕಾತಿ ಅನುಮೋದನೆ ನೀಡಲು ಈ ಆದೇಶ.

**ಆದೇಶ ಸಂಖ್ಯೆ: ಕಾಶಿಇ/113/ಖಾಹುಭ/2007-08/ಪಿಸಿಸಿ-2/ನೇ.ವಿ.(ಭಾಗ-2), ಬೆಂಗಳೂರು.**

**ದಿನಾಂಕ:11.01.2013**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸಿಂಧಗಿಯ ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಂಜೂರಾದ ಖಾಲಿ ಇರುವ 04 ಬೋಧಕ ಹುದ್ದೆಗಳಿಗೆ ಆಡಳಿತ ಮಂಡಳಿ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿಕೊಂಡಿರುವ ಈ ಕೆಳಕಂಡ ಅಭ್ಯರ್ಥಿಗಳ ನೇಮಕಾತಿಯನ್ನು ಅವರುಗಳ ಹೆಸರಿನ ಮುಂದೆ ತಿಳಿಸಿರುವ ವೇತನ ಶ್ರೇಣಿಯಲ್ಲಿ ಈ ಕೆಳಕಂಡ ನಿಬಂಧನೆಗೆ ಒಳಪಟ್ಟು ಅನುಮೋದನೆಯನ್ನು ನೀಡಲಾಗಿದೆ.

| ಕ್ರಮ ಸಂಖ್ಯೆ | ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ | ವಿಷಯ | ಜನ್ಮ ದಿನಾಂಕ | ವಿದ್ಯಾರ್ಹತೆ | ವೇತನ ಶ್ರೇಣಿ | ಮೀಸಲಾತಿ |
|---|---|---|---|---|---|---|
| 1 | ಡಾ:ಸುಮಾ ನಿರ್ಣಿ | ಇತಿಹಾಸ | 01.07.1974 | ಎಂ.ಎ. ಪಿಹೆಚ್.ಡಿ. | ರೂ.15600-39100 + ಎಜಿಪಿ 6000 (ಯುಜಿಸಿ) | ಜಿ.ಎಂ. |

Original to be verified

Chairman,
Shri Padmaraj Vidya Vardhak Samstha Sarangamath SINDGI

Scanned with OKEN Scanner

| ಕ್ರಮ ಸಂಖ್ಯೆ | ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ | ವಿಷಯ | ಜನ್ಮ ದಿನಾಂಕ | ವಿದ್ಯಾರ್ಹತೆ | ವೇತನ ಶ್ರೇಣಿ | ಮೀಸಲಾತಿ |
|---|---|---|---|---|---|---|
| 2 | ಡಾ:ಪ್ರಕಾಶ ಲಮಾಣಿ Dr. Prakash Rathod | ಅರ್ಥಶಾಸ್ತ್ರ Economics | 01.06.1981 | ಎಂ.ಎ. ಪಿಹೆಚ್.ಡಿ. | ರೂ.15600-39100 + ಎಜಿಪಿ 6000 (ಯುಜಿಸಿ) | ಪ.ಜಾ. |
| 3 | ಡಾ:ತಿಪ್ಪಣ್ಣ ಬ ದೊಡಮನಿ | ಸಮಾಜಶಾಸ್ತ್ರ | 01.06.1971 | ಎಂ.ಎ. ಪಿಹೆಚ್.ಡಿ. | ರೂ.15600-39100 + ಎಜಿಪಿ 6000 (ಯುಜಿಸಿ) | ಪ.ಜಾ |
| 4 | ಡಾ:ಬಸವರಾಜ ಎಸ್. ಹಿರೇಮಠ | ಸಮಾಜಶಾಸ್ತ್ರ | 22.07.1973 | ಎಂ.ಎ. ಪಿಹೆಚ್.ಡಿ. | ರೂ.15600-39100 + ಎಜಿಪಿ 6000 (ಯುಜಿಸಿ) | ಜಿ.ಎಂ. |

ಷರತ್ತುಗಳು:-

1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿನಾಂಕ:03.10.81 ಮತ್ತು ಈ ನಿಟ್ಟಿನಲ್ಲಿ ಆಗಿಂದಾಗ್ಗೆ ಹೊರಡಿಸಿರುವ ಮತ್ತು ಹೊರಡಿಸುವ ತಿದ್ದುಪಡಿ ಹಾಗೂ ಸ್ಪಷ್ಟೀಕರಣ ಅನುಗುಣವಾಗಿ ನಿಗದಿಪಡಿಸಿದ ಕಾರ್ಯಭಾರವನ್ನು ಹೊಂದಿರತಕ್ಕದ್ದು. ಅಲ್ಲದೆ ಮುಂದೆ ಸರ್ಕಾರ ವಿಧಿಸಬಹುದಾದ ಷರತ್ತುಗಳಿಗೆ ಈ ನೇಮಕಾತಿ ಒಳಪಟ್ಟಿರುತ್ತದೆ.
2) ಸದರಿ ಅಭ್ಯರ್ಥಿಗಳಿಗೆ ವೇತನ ಶ್ರೇಣಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಎನ್ಇ/2009 ದಿನಾಂಕ:24-12-2009ರ ನಿಯಮ 7ರಲ್ಲಿರುವ ಉಪನಿಯಮ (viii) ಮತ್ತು (ix) ರಲ್ಲಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3) ಸದರಿ ಅಭ್ಯರ್ಥಿಗಳ ನೇಮಕಾತಿಯು ಈ ಆದೇಶದ ದಿನಾಂಕದ ನಂತರ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಜಾರಿಗೆ ಬರುತ್ತದೆ ಹಾಗೂ ಯಾವುದೇ ಹಿಂದಿನ ವೇತನ ಬಾಕಿಗೆ ಅರ್ಹತೆ ಹೊಂದಿರುವುದಿಲ್ಲ.
4) ಸದರಿಯವರ ನೇಮಕಾತಿಯ ಸೇವಾ ವಿವರಗಳು ಕಾಲೇಜಿನ ಸ್ಥಳೀಯ ಲೆಕ್ಕ ಪತ್ರ ತನಿಖಾ ಸಮಯದಲ್ಲಿ ಪರಿಶೀಲನೆಗೆ ಒಳಪಟ್ಟಿರುತ್ತದೆ. ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕಾಲೇಜಿಗೆ ನೀಡುತ್ತಿರುವ ಅನುದಾನವನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ಕಾಯ್ದಿರಿಸಿದೆ.
5) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಆಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
6) ಮೇಲ್ಕಂಡ ಅಭ್ಯರ್ಥಿಗಳಿಗೆ ಅವರು ಕೆಲಸಕ್ಕೆ ಹಾಜರಾದ ನಂತರ ಸರ್ಕಾರಿ ಆದೇಶ ಸಂಖ್ಯೆ: FD (Spl) 04/PET/2005 ದಿನಾಂಕ:31-03-2006ರಲ್ಲಿ ಪ್ರಕಟಿತವಾಗಿರುವ New Defined Contributory Pension ಅನ್ವಯವಾಗುತ್ತದೆ.
7) ಈ ನೇಮಕಾತಿಯು ಪೋಲೀಸ್ ಇಲಾಖೆಯಿಂದ ಪಡೆಯುವ ವರದಿ ಹಾಗೂ ಕ್ರಮ ಸಂಖ್ಯೆ: (2) ಮತ್ತು (3) ರಲ್ಲಿನ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಸಲ್ಲಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ:

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಛೇರಿ, ಧಾರವಾಡ - ಮುಂದಿನ ಅಗತ್ಯ ಕ್ರಮಕ್ಕಾಗಿ - ಮೇಲ್ಕಂಡ ಉಪನ್ಯಾಸಕರುಗಳ ಮೂಲ ಅಂಕಪಟ್ಟಿಗಳು, ಶೈಕ್ಷಣಿಕ ದಾಖಲಾತಿಗಳನ್ನು ಪರಿಶೀಲಿಸಿ, ದೃಢೀಕರಿಸುವಂತೆ ಸೂಚಿಸಿದೆ.
2) ಅಧ್ಯಕ್ಷರು/ಕಾರ್ಯದರ್ಶಿಗಳು, ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥಾ ಸಾರಂಗಮಠ, ಸಿಂಧಗಿ - 586 128, ಬಿಜಾಪುರ ಜಿಲ್ಲೆ - ಮಾಹಿತಿಗಾಗಿ.

Chairman,
Shri Padmaraj Vidya Vardhak
Samstha Sarangamath SINDGI



Scanned with OKEN Scanner

1. Govt. order Copy of Approval to Shri Basavaraj Paulingappa - Dept of Sociology with effect from - 26-08-2019 (Sl.No. 05 to be effected)

G.P.Porwal Arts, Comm. & V. Salimath Sci. College, SINDGI
Inward No: 213
Date: 14-8-2019

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಶ್ರೀ.ಪದ್ಮರಾಜ ವಿದ್ಯಾವರ್ಧಕ ಸಂಸ್ಥೆ, ಸಾರಂಗಮಠ, ಸಿಂಧಗಿ, ಇವರ ವ್ಯಾಪ್ತಿಗೊಳಪಡುವ ಜಿ.ಪಿ ಪೋರವಾಲ್ ಕಲಾ, ವಾಣಿಜ್ಯ & ವಿ.ವಿ.ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂಧಗಿ ಇಲ್ಲಿ ಖಾಲಿ ಇರುವ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರು ಹಾಗೂ ಗ್ರಂಥಪಾಲಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ:ಇಡಿ/146/ಯುಪಿಸಿ/79, ದಿ:03.10.81 ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳು.
2) ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಯುಎನ್ಇ/2009, ದಿ:24.12.2009.
3) ಸರ್ಕಾರದ ಪತ್ರ ಸಂಖ್ಯೆ:ಇಡಿ/240/ಯುಪಿಸಿ/2014 ದಿ:01.09.2017.
4) ಈ ಕಛೇರಿಯ ಸಮಸಂಖ್ಯೆಯ ಪತ್ರ ದಿನಾಂಕ:21.03.2018.
5) ಈ ಕಛೇರಿಯ ಸೇರ್ಪಡೆ ಆದೇಶ ಸಂಖ್ಯೆ:ಕಾಶಿಇ/173/ಖಾಹುಭ/2017-18/ನೇವಿ-2 ದಿನಾಂಕ:19.03.2018.
6) ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರ ಪತ್ರ ಸಂಖ್ಯೆ:ಕಾಶಿಇ/ಪ್ರಾಕಧಾ/82/ಖಾಹುಭ/ಜಿಇಎಸ್-7/2017-18/73 ದಿನಾಂಕ:24.12.2018.
7) ಜಿಲ್ಲಾ ಪೋಲೀಸ್ ಅಧೀಕ್ಷಕರುಗಳ ವಿವಿಧ ದಿನಾಂಕಗಳ ಪತ್ರಗಳು.
8) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ವಿವಿಧ ದಿನಾಂಕಗಳ ಪತ್ರಗಳು.
9) ವಿವಿಧ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಂದ ಬಂದಿರುವ ಪತ್ರಗಳು
10) ಈ ಕಛೇರಿಯ ಸಮಸಂಖ್ಯೆಯ ಪತ್ರ ದಿನಾಂಕ:07.06.2019.
11) ಸರ್ಕಾರದ ಪತ್ರ ಸಂಖ್ಯೆ:ಇಡಿ/200/ಯುಪಿಸಿ/2019 ದಿ:11.07.2019.
12) ಸರ್ಕಾರದ ಆದೇಶ ಸಂಖ್ಯೆ:ಇಡಿ/483/ಯುಎನ್ಇ/2017/ಬೆಂ ದಿ:16.03.2019.

** ** **

ಪ್ರಸ್ತಾವನೆ:

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಮಂಜೂರಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಉಲ್ಲೇಖ (3)ರ ಸರ್ಕಾರದ ಆದೇಶದನ್ವಯ, ಈ ಕಛೇರಿಯ ಉಲ್ಲೇಖ (4)ರ ಪತ್ರದಲ್ಲಿ **ಶ್ರೀ.ಪದ್ಮರಾಜ ವಿದ್ಯಾವರ್ಧಕ ಸಂಸ್ಥೆ, ಸಾರಂಗಮಠ, ಸಿಂಧಗಿ, ಇವರ ವ್ಯಾಪ್ತಿಗೊಳಪಡುವ ಜಿ.ಪಿ ಪೋರವಾಲ್ ಕಲಾ, ವಾಣಿಜ್ಯ & ವಿ.ವಿ.ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂಧಗಿ** ಇಲ್ಲಿ ಖಾಲಿ ಇರುವ 07 ಸಹಾಯಕ ಪ್ರಾಧ್ಯಾಪಕರು ಹಾಗೂ 01 ಗ್ರಂಥಪಾಲಕರ ಹುದ್ದೆಗಳನ್ನು ಭರ್ತಿ ಮಾಡಲು ಜಾಹಿರಾತು ನೀಡಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ಆಯ್ಕೆ ಸಮಿತಿ ಮೂಲಕ ಸಂದರ್ಶನ ನಡೆಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುವಂತೆ ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ತಿಳಿಸಲಾಗಿತ್ತು. ಅದರಂತೆ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಮಂಡಳಿ ದಿನಪತ್ರಿಕೆಗಳಲ್ಲಿ ಜಾಹಿರಾತುಪಡಿಸಿ, ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ, ಆಯ್ಕೆ ಸಮಿತಿ ರಚಿಸಿ, ಅರ್ಹ 08 ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಸದರಿ ಬೋಧಕರ ಹುದ್ದೆಗಳಿಗೆ ಆಡಳಿತ ಮಂಡಳಿಯು ಆಯ್ಕೆ ಸಮಿತಿ ಮುಖಾಂತರ ಆಯ್ಕೆ ಮಾಡಿಕೊಂಡಿರುವ ಅರ್ಹ 08 ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ ಉಲ್ಲೇಖ (6)ರ ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಸದರಿ ಖಾಲಿ ಹುದ್ದೆಗಳಿಗೆ ಆಯ್ಕೆ ಸಮಿತಿ ಮೂಲಕ ಆಯ್ಕೆ ಹೊಂದಿರುವ ಅಭ್ಯರ್ಥಿಗಳು ನಿಯಮಾನುಸಾರ ನಿಗದಿತ ವಯೋಮಿತಿ ಹಾಗೂ ವಿದ್ಯಾರ್ಹತೆ ಹೊಂದಿರುತ್ತಾರೆ. ಇವರುಗಳ ವಿರುದ್ಧ ಯಾವುದೇ ವಿಧವಾದ ವ್ಯತಿರಿಕ್ತ ವರದಿಗಳು ವರದಿಯಾಗಿರುವುದಿಲ್ಲವೆಂದು ಉಲ್ಲೇಖ (7)ರಲ್ಲಿ ಸಂಬಂಧಪಟ್ಟ ಪೋಲೀಸ್ ಅಧೀಕ್ಷಕರು ವರದಿ ನೀಡಿರುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಜಾತಿ ಸಿಂಧುತ್ವ ಪ್ರಮಾಣ ಪತ್ರಗಳನ್ನು ಉಲ್ಲೇಖ (8)ರಲ್ಲಿ ಸಂಬಂಧಪಟ್ಟ ಸಮಾಜ ಕಲ್ಯಾಣಾಧಿಕಾರಿಗಳು ನೀಡಿರುತ್ತಾರೆ. ಸದರಿ 07 ಅಭ್ಯರ್ಥಿಗಳು ಪಡೆದಿರುವ ಸ್ನಾತಕೋತ್ತರ ಪದವಿ ಪಿಹೆಚ್.ಡಿ

To Sri B.P.S 13-02-19

DCE-287 G P Porawal Sindagi

Chairman,
Shri Padmaraj Vidya Vardhak Samstha Sarangamath SINDGI

Scanned with OKEN Scanner

ಮತ್ತು ಕೆಎಸ್‌ಇಟಿ ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಂದ ನೈಜತೆಯ ಪ್ರಮಾಣ ಪತ್ರಗಳನ್ನು ಉಲ್ಲೇಖ (9)ರಲ್ಲಿ ಪಡೆಯಲಾಗಿದೆ. ಎನ್.ಇ.ಟಿ ಪ್ರಮಾಣ ಪತ್ರದ ನೈಜತೆಯನ್ನು ಆನ್‌ಲೈನ್ ಮುಖಾಂತರ ಪಡೆಯಲಾಗಿದೆ. ಉಲ್ಲೇಖ (10)ರ ಈ ಕಛೇರಿಯ ಸಮಸಂಖ್ಯೆಯ ಪತ್ರದಲ್ಲಿ, ಆಡಳಿತ ಮಂಡಳಿ 08 ಬೋಧಕರ ಹುದ್ದೆಗಳಿಗೆ ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳ ಪೈಕಿ, ಹಿಂದಿ ವಿಷಯದ ಸಾಮಾನ್ಯ ವರ್ಗಕ್ಕೆ ಮೀಸಲಾದ ಹುದ್ದೆಯಲ್ಲಿ ಆಯ್ಕೆಯಾಗಿರುವ ಶ್ರೀ.ಪಾಂಡೆ ವಿಕ್ರಮ ಅಶೋಕ್, ಇವರ ವಿರುದ್ಧ ದೂರು ದಾಖಲಾಗಿರುವುದರಿಂದ, ಇವರನ್ನು ಹೊರತುಪಡಿಸಿ, ಉಳಿದ 07 ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸಲು ಸರ್ಕಾರದ ಅನುಮತಿ ಕೋರಲಾಗಿತ್ತು. ಅದರಂತೆ, ಉಲ್ಲೇಖ (11)ರ ಸರ್ಕಾರದ ಪತ್ರದಲ್ಲಿ ಸದರಿ 07 ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸಲು ಸರ್ಕಾರವು ಅನುಮತಿ ನೀಡಿರುತ್ತದೆ. ಆದ್ದರಿಂದ ಸದರಿ 07 ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸಲು ಈ ಆದೇಶ:-

**ಆದೇಶ ಸಂಖ್ಯೆ:ಕಾಶಿಇ/287/ಖಾಹುಭ/2017-18/ಧಾವಿ/ನೇವಿ-2, ಬೆಂಗಳೂರು, ದಿನಾಂಕ:26/7/2019**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, **ಶ್ರೀ.ಪದ್ಮರಾಜ ವಿದ್ಯಾವರ್ಧಕ ಸಂಸ್ಥೆ, ಸಾರಂಗಮಠ, ಸಿಂಧಗಿ,** ಇವರ ವ್ಯಾಪ್ತಿಗೊಳಪಡುವ **ಜಿ.ಪಿ ಪೋರವಾಲ್ ಕಲಾ, ವಾಣಿಜ್ಯ & ವಿ.ವಿ.ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂಧಗಿ** ಇಲ್ಲಿ ಖಾಲಿ ಇರುವ 06 ಸಹಾಯಕ ಪ್ರಾಧ್ಯಾಪಕರು ಹಾಗೂ 01 ಗ್ರಂಥಪಾಲಕರ ಹುದ್ದೆಗಳಿಗೆ ಆಡಳಿತ ಮಂಡಳಿ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿರುವ ಈ ಕೆಳಕಂಡ ಅಭ್ಯರ್ಥಿಗಳ ನೇಮಕಾತಿಯನ್ನು ಅವರ ಹೆಸರಿನ ಮುಂದೆ ತಿಳಿಸಿರುವ ವೇತನ ಶ್ರೇಣಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುಮೋದಿಸಲಾಗಿದೆ.

| ಕ್ರ. ಸಂ | ಅಭ್ಯರ್ಥಿಯ ಹೆಸರು ಶ್ರೀ/ಶ್ರೀಮತಿ | ವಿಷಯ & ಪದನಾಮ | ಜನ್ಮ ದಿನಾಂಕ | ವಿದ್ಯಾರ್ಹತೆ | ಯುಜಿಸಿ ವೇತನ ಶ್ರೇಣಿ ರೂ | ವರ್ಗ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಪ್ರತಿಕಾ ಬಿನ್:ಮಲಕಾಜಪ್ಪ | ಕನ್ನಡ ಸಹಾಯಕ ಪ್ರಾಧ್ಯಾಪಕರು | 10.05.1985 | ಎಂ.ಎ-74% ಎನ್.ಇ.ಟಿ ಕೆಎಸ್‌ಇಟಿ | 57,700-1,82,400 | ಪ.ಪಂ | ಶ್ರೀ.ಎಂ.ವಿ.ಗಣಚಾರಿ ಇವರ ನಿವೃತ್ತಿಯಿಂದ ದಿ:28.02.2006 ರಂದು ತೆರವಾದ ಹುದ್ದೆಗೆದುರಾಗಿ |
| 2 | ಮಹಾದೇವ ಸಂಕಪಾಲ ಬಿನ್:ಜಯವಂತ | ಹಿಂದಿ ಸಹಾಯಕ ಪ್ರಾಧ್ಯಾಪಕರು | 02.08.1983 | ಎಂ.ಎ-64% ಪಿ.ಹೆಚ್.ಡಿ | 57,700-1,82,400 | ಪ.ಜಾ | ಶ್ರೀ.ಎಸ್.ಬಿ.ಜಾಧವ್ ಇವರ ನಿವೃತ್ತಿಯಿಂದ ದಿ:31.05.2014 ರಂದು ತೆರವಾದ ಹುದ್ದೆಗೆದುರಾಗಿ |
| 3 | Basavaraj ಬಸವರಾಜ್ ಬಿನ್:ರಾಮಲಿಂಗಪ್ಪ | Economics ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | 17.06.1990 | ಎಂ.ಎ-68.87% ಕೆ.ಎಸ್.ಇ.ಟಿ | 57,700-1,82,400 | ಸಾ.ಅ | ಶ್ರೀ.ಎಂ.ಎಸ್.ಚಂದಕಾವಟೆ ಇವರ ನಿವೃತ್ತಿಯಿಂದ ದಿ:30.06.2008 ರಂದು ತೆರವಾದ ಹುದ್ದೆಗೆದುರಾಗಿ |
| 4 | ಭೀಮಾಶಂಕರ್ ಅಳಗುಂಡಗಿ ಬಿನ್:ರೇವಣಸಿದ್ದಪ್ಪ | ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | 22.07.1990 | ಎಂ.ಎ-71.12% ಕೆ.ಎಸ್.ಇ.ಟಿ | 57,700-1,82,400 | ಸಾ.ಅ | ಶ್ರೀ.ಎಸ್.ಸಿ.ಆವತಿ ಇವರ ನಿವೃತ್ತಿಯಿಂದ ದಿ:31.08.2010 ರಂದು ತೆರವಾದ ಹುದ್ದೆಗೆದುರಾಗಿ |
| 5 | ಪ್ರಕಾಶ್ ತೇಜು ಬಿನ್:ತೇಜು | ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | 04.10.1989 | ಎಂ.ಕಾಂ-60.93% ಕೆ.ಎಸ್.ಇ.ಟಿ | 57,700-1,82,400 | ಪ.ಜಾ | ಶ್ರೀ.ವಿ.ವಿ.ಕಂದೂರ್ ಇವರ ನಿವೃತ್ತಿಯಿಂದ ದಿ:31.10.2014 ರಂದು ತೆರವಾದ ಹುದ್ದೆಗೆದುರಾಗಿ |
| 6 | ಶ್ರೀಕಾಂತ್ ಪಾಟೀಲ್ ಬಿನ್:ಲಿಂಗನಗೌಡ ಪಾಟೀಲ್ | ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | 01.06.1981 | ಎಂ.ಕಾಂ-56.55% ಪಿ.ಹೆಚ್.ಡಿ | 57,700-1,82,400 | ಸಾ.ಅ | ಶ್ರೀ.ಬಿ.ಎಸ್.ಹನುಮಶೆಟ್ಟಿ ಇವರ ನಿವೃತ್ತಿಯಿಂದ ದಿ:31.05.2015 ರಂದು ತೆರವಾದ ಹುದ್ದೆಗೆದುರಾಗಿ |

DCE-287 G P Porawal Sindagi

Chairman,
Shri Padmaraj Vidya Vardhak
Samstha Sarangamath SINDGI.

Scanned with OKEN Scanner